ವಿದ್ಯಾವರ್ಧಕ ಸಂಘ (ರಿ), ಮೈಸೂರು

**ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು**

ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು – 570 001

40ನೇ ವರ್ಷದ ಸಂಭ್ರಮಾಚರಣೆ : 1978-2018

**ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ರೋವರ್ ದಳ – ದಿ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಘಟಕ**

**ಸ್ವಾಮಿ ವಿವೇಕಾನಂದರ 156ನೇ ಜಯಂತಿ ಹಾಗೂ ರಾಷ್ಟ್ರೀಯ ಯುವದಿನೋತ್ಸವದ ಪ್ರಯುಕ್ತ ಸೈಕಲ್ ಜಾಥಾ**

# National Youth Day -Bicycle Jatha (Rally) 12-Jan-2019




ಕಾಲೇಜಿನ ೪೦ನೇ ವರ್ಷದ ಸಂಭ್ರಮಾಚರಣೆಯ ಕಾರ್ಯಕ್ರಮದ ಅಂಗವಾಗಿ ಕಾಲೇಜಿನ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಘಟಕದ ವತಿಯಿಂದ "ಸ್ವಾಮಿ ವಿವೇಕಾನಂದರ ೧೫೬ನೇ ಜಯಂತಿ ಹಾಗೂ ರಾಷ್ಟ್ರೀಯ ಯುವ ಜನೋತ್ಸವ ದಿವಸ"ದ ಪ್ರಯುಕ್ತ ಸ್ವಾಮಿ ವಿವೇಕಾನಂದರ ಸಂದೇಶಗಳನ್ನು ಪ್ರಚಾರ ಪಡಿಸಲು ಸೈಕಲ್ ಜಾಥಾವನ್ನು ಏರ್ಪಡಿಸಲಾಗಿತ್ತು. ಈ ಜಾಥಾದ ಉದ್ಘಾಟನೆಯನ್ನು ವಿದ್ಯಾವರ್ಧಕ ಸಂಘ(ರಿ)ದ ಗೌರವ ಅಧ್ಯಕ್ಷರಾದ ಶ್ರೀ ಗುಂಡಪ್ಪಗೌಡರವರು ಸ್ಕೌಟ್ಸ್ ಬಾವುಟವನ್ನು ನಿಶಾನೆ ತೋರುವುದರ ಮೂಲಕ ಉದ್ಘಾಟಿಸಿದರು. ಉದ್ಘಾಟನಾ ಸಮಾರಂಭದಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿಗಳು ಹಾಗೂ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಮೈಸೂರು ಜಿಲ್ಲಾ ಮುಖ್ಯ ಆಯುಕ್ತರೂ ಆದ ಶ್ರೀ.ಪಿ.ವಿಶ್ವನಾಥ್, ಆಡಳಿತ ಮಂಡಳಿ ಸದಸ್ಯರು ಹಾಗೂ ಸ್ಕೌಟ್ಸ್ ಅಂಡ್ ಗೈಡ್ಸ್‌ನ ಮೈಸೂರು ಜಿಲ್ಲಾ ಮುಖ್ಯ ಸಂಘಟಕರೂ ಆದ ಶ್ರೀ.ಅಬ್ದುಲ್ ಜಮೀಲ್‌ರವರು, ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರವರು,

೪೦ನೇ ವರ್ಷದ ಸಂಭ್ರಮಾಚರಣೆ ಸಂಚಾಲಕರಾದ ಪ್ರೊ.ಹೆಚ್.ಜೆ.ಚಂದ್ರಶೇಖರ್, ಸ್ಕೌಟ್ಸ್ ಅಂಡ್ ಗೈಡ್ಸ್ ಅಧಿಕಾರಿಗಳಾದ ಶ್ರೀ ಅರವಿಂದ್.ಆರ್ ಹಾಗೂ ಕು.ಮುಬಿನ್ ತಾಜ್ ಅವರುಗಳು, ಅಧ್ಯಾಪಕರು, ಅಧ್ಯಾಪಕೇತರರು ಹಾಜರಿದ್ದರು. ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸ್ಕೌಟ್ಸ್ ಅಂಡ್ ಗೈಡ್ಸ್ ಸ್ವಯಂಸೇವಕರಿಗೆ ಮೈಸೂರು ಮಹಾನಗರ ಪಾಲಿಕೆಯ ವತಿಯಿಂದ ಟ್ರಿಣ್ ಟ್ರಿಣ್ ಸೈಕಲ್‌ಗಳನ್ನು ಒದಗಿಸಲಾಗಿತ್ತು.

ಸೈಕಲ್ ಜಾಥಾವು ಕಾಲೇಜಿನಿಂದ ಪ್ರಾರಂಭವಾಗಿ ಶೇಷಾದ್ರಿ ಅಯ್ಯರ್ ರಸ್ತೆ, ಜೆ.ಕೆ.ಮೈದಾನ ವೃತ್ತ–ಬಲತಿರುವು–ಕೆ.ಆರ್.ಆಸ್ಪತ್ರೆ ರಸ್ತೆ–ಆಯುರ್ವೇದಿಕ್ ಆಸ್ಪತ್ರೆ ವೃತ್ತ–ಬಲತಿರುವು–ಎಸ್.ಆರ್.ರಸ್ತೆ–ಎಡತಿರುವು–ಓಲ್ಡ್ ಬ್ಯಾಂಕ್ ರಸ್ತೆ–ಗಾಂಧೀ ವೃತ್ತ–ದೊಡ್ಡ ಗಡಿಯಾರ ವೃತ್ತ–ಹಳೇ ಪ್ರತಿಮೆ ವೃತ್ತ–ಎಡತಿರುವು–ಹಾರ್ಡಿಂಜ್ ವೃತ್ತ–ಬಲತಿರುವು–ಕುಸ್ತಿ ಅಖಾಡ ಜಂಕ್ಷನ್–ಗನ್‌ಹೌಸ್ ವೃತ್ತ–ಪಾಠಶಾಲಾ ವೃತ್ತ–ಚಾಮರಾಜ ಜೋಡಿರಸ್ತೆ–ರಾಮಸ್ವಾಮಿ ವೃತ್ತ–ರೋಟರಿ ಸ್ಕೂಲ್–ಕೃಷ್ಣವಿಲಾಸ್ ರಸ್ತೆ–ವಿವೇಕಾನಂದ ಸ್ಮಾರಕ–ದೇವರಾಜ ಅರಸು ರಸ್ತೆ–ಡಿ.ಸಿ ಕಛೇರಿ–ಸ್ಕೌಟ್ಸ್ & ಗೈಡ್ಸ್ ಮೈದಾನ–ಹುಣಸೂರು ಮುಖ್ಯ ರಸ್ತೆ– ಮಹಾರಾಣಿ ಕಾಲೇಜು ಜಂಕ್ಷನ್–ವಾಲ್ಮೀಕಿ ರಸ್ತೆ ಮೂಲಕ ಸಾಗಿ ರಾಮಕೃಷ್ಣ ಆಶ್ರಮ ತಲುಪಿ ಮತ್ತೆ ಅಲ್ಲಿಂದ ಸಂಜೆ ೪.೦೦ ಗಂಟೆಗೆ ಹೊರಟು ದೋಭಿ ಘಾಟ್ ರಸ್ತೆ–ಬಂಬೂಬಜ಼ಾರ್–ಆರ್.ಎಂ.ಸಿ ವೃತ್ತ–ಸಯ್ಯಾಜಿ ರಾವ್ ರಸ್ತೆ ಮೂಲಕ ಕಾಲೇಜು ತಲುಪಿ ಅಂತ್ಯಗೊಳಿಸಲಾಗುವುದು.

ಈ ಸೈಕಲ್ ಜಾಥಾ ಕಾರ್ಯಕ್ರಮಕ್ಕೆ ಸಹಕಾರ ನೀಡಿದ ವಾರ್ಡ್ ನಂ. ೪ ಮಹದೇಶ್ವರ ಬಡಾವಣೆಯ ಕಾರ್ಪೋರೇಟರ್ ಶ್ರೀ.ಕೆ.ವಿ.ಶ್ರೀಧರ್ ಮತ್ತು ದೇವರಾಜ ಸಂಚಾರಿ ಪೊಲೀಸ್ ವಿಭಾಗದ ಸಹಾಯಕ ಪೊಲೀಸ್ ಆಯುಕ್ತರಾದ ಶ್ರೀ.ಜಿ.ಎನ್.ಮೋಹನ್‌ರವರನ್ನು ಪ್ರಾಚಾರ್ಯರು ಅಭಿನಂದಿಸಿರುತ್ತಾರೆ.























VIDYAVARDHAKA LAW COLLEGE
ವಿದ್ಯಾವರ್ಧಕ ಸಂಘ (ರಿ), ಮೈಸೂರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
40ನೇ ವರ್ಷದ ಸಂಭ್ರಮಾಚರಣೆ : 1978-2018
IQAC
ಸೈಕಲ್ ಜಾಥಾ



Vidyavardhaka First Grade College, Mysuru – Events, Special Talks, Seminars and Activities page






